ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
Bangalore Development Authority

ಸಂಖ್ಯೆ ಬೆಂಅಪ್ರಾ/ನಮ/ಅಸ/ಅಅ-3/ತಾಸ-2/ದ/05/2025-26
No.

ದಿನಾಂಕ :07.05.2025
Date :
ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಅನುಸೂಚಿ-ಎ 5
(ಉಪವಿಧಿ ಸಂಖ್ಯೆ : 4.1)

**ಮಾರ್ಪಾಡಿತ ನಕ್ಷೆ ಮಂಜೂರಾತಿ ಪತ್ರ**

ಶ್ರೀಮತಿ/ಶ್ರೀ,

**M/s Iskcon Chartities and India Heritage Trust,
Doddakallasandra, 8th Mile, Kanakapura Road,
Bangalore 560062.**

ಮಾನ್ಯರೆ,

ವಿಷಯ :- ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ನಂ. 39/1, 39/2, 47/1, 47/2 ಮತ್ತು ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. 55/1(ಪಿ), 55/2(ಪಿ), 56, 57, 58, 59, 60(ಪಿ) ರ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ 2ತಳ+ನೆಲ+30 ಮೇಲಂತಸ್ತು+ಟೆರೇಸ್ ಹೊಂದಿರುವ ಟವರ್-6 ವಸತಿ ಕಟ್ಟಡದಲ್ಲಿ 234 ವಸತಿ ಘಟಕಗಳು ಮತ್ತು ಇಡಬ್ಲ್ಯೂಎಸ್ 26 ಘಟಕಗಳು, 2ತಳ+ನೆಲ+30 ಮೇಲಂತಸ್ತು + ಟೆರೇಸ್ ಹೊಂದಿರುವ ಟವರ್-7 ವಸತಿ ಕಟ್ಟಡದಲ್ಲಿ 234 ವಸತಿ ಘಟಕಗಳು ಮತ್ತು ಇಡಬ್ಲ್ಯೂಎಸ್ 26 ಘಟಕಗಳು ಒಟ್ಟಾರೆ 468 ವಸತಿ ಘಟಕಗಳು ಮತ್ತು ಇಡಬ್ಲ್ಯೂಎಸ್ 52 ವಸತಿ ಘಟಕಗಳನ್ನೊಳಗೊಂಡ ಬಹುಮಹಡಿ ವಸತಿ ಸಮುಚ್ಚಯ ಕಟ್ಟಡಗಳಿಗೆ ಮತ್ತು ಟವರ್-6 & 7 ರಲ್ಲಿ ನೆಲ ಅಂತಸ್ತಿನಲ್ಲಿ ಕ್ಲಬ್ ಹೌಸ್ ಹೊಂದಿರುವ ಕಟ್ಟಡವನ್ನು ನಿರ್ಮಿಸಲು ಮಾರ್ಪಡಿತ ನಕ್ಷೆ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ :- ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ: 147, ದಿನಾಂಕ: 11.04.2025

******

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ನಂ. 39/1, 39/2, 47/1, 47/2 ಮತ್ತು ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. 55/1(ಪಿ), 55/2(ಪಿ), 56, 57, 58, 59, 60(ಪಿ) ರ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ 2ತಳ+ನೆಲ+30 ಮೇಲಂತಸ್ತು+ಟೆರೇಸ್ ಹೊಂದಿರುವ ಟವರ್-6 ವಸತಿ ಕಟ್ಟಡದಲ್ಲಿ 234 ವಸತಿ ಘಟಕಗಳು ಮತ್ತು ಇಡಬ್ಲ್ಯೂಎಸ್ 26 ಘಟಕಗಳು, 2ತಳ+ನೆಲ+30 ಮೇಲಂತಸ್ತು + ಟೆರೇಸ್ ಹೊಂದಿರುವ ಟವರ್-7 ವಸತಿ ಕಟ್ಟಡದಲ್ಲಿ 234 ವಸತಿ ಘಟಕಗಳು ಮತ್ತು ಇಡಬ್ಲ್ಯೂಎಸ್ 26 ಘಟಕಗಳು ಒಟ್ಟಾರೆ 468 ವಸತಿ ಘಟಕಗಳು ಮತ್ತು ಇಡಬ್ಲ್ಯೂಎಸ್ 52 ವಸತಿ ಘಟಕಗಳನ್ನೊಳಗೊಂಡ ಬಹುಮಹಡಿ ವಸತಿ ಸಮುಚ್ಚಯ ಕಟ್ಟಡಗಳಿಗೆ ಮತ್ತು ಟವರ್-6 & 7 ರಲ್ಲಿ ನೆಲ ಅಂತಸ್ತಿನಲ್ಲಿ ಕ್ಲಬ್ ಹೌಸ್ ಹೊಂದಿರುವ ಕಟ್ಟಡವನ್ನು ನಿರ್ಮಿಸಲು ಮಾರ್ಪಡಿತ ನಕ್ಷೆ ಮಂಜೂರಾತಿ ನೀಡುವಂತೆ ಕೋರಿರುತ್ತೀರಿ.

ಅದರನ್ವಯ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ: 147, ದಿನಾಂಕ: 11.04.2025 ರಂದು ಸದರಿ ಬಹುಮಹಡಿ ವಸತಿ ಸಮುಚ್ಚಯ ಕಟ್ಟಡಗಳ ಮರು ಮಾರ್ಪಡಿತ ನಕ್ಷೆ ಮಂಜೂರಾತಿಗೆ ಅನುಮೋದನೆ ನೀಡಿರುತ್ತಾರೆ. ಈ ಸಂಬಂಧ ತಾವು ನಕ್ಷೆ ಮಂಜೂರಾತಿ ಶುಲ್ಕಗಳ ಮೊತ್ತವಾದ ರೂ. 2,71,31,400/- (ಎರಡು ಕೋಟಿ ಎಪ್ಪತ್ತೊಂದು ಲಕ್ಷ ಮೂವತ್ತೊಂದು ಸಾವಿರದ ನಾಲ್ಕು ನೂರು ರೂಪಾಯಿಗಳು ಮಾತ್ರ) ಗಳನ್ನು ಪ್ರಾಧಿಕಾರದ

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು



ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು – 560 020. ದೂರವಾಣಿ : 080-23443075, 23445005
T. Chowdaiah Road, Kumarapark West, Bangalore - 560 020, Telephone : 080 - 23443075, 23445005

ಆವರಣದಲ್ಲಿರುವ ಕೆನರಾ ಬ್ಯಾಂಕ್ ಚಲನ್ ಸಂಖ್ಯೆ: GN2504660, ದಿನಾಂಕ: 25.04.2025 ರಂದು ಪ್ರಾಧಿಕಾರಕ್ಕೆ ಪಾವತಿಸಿರುತ್ತೀರಿ.

ಆದುದರಿಂದ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ನಂ. 39/1, 39/2, 47/1, 47/2 ಮತ್ತು ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. 55/1(ಪಿ), 55/2(ಪಿ), 56, 57, 58, 59, 60(ಪಿ) ರ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ 2ತಳ+ನೆಲ+30 ಮೇಲಂತಸ್ತು+ಟೆರೇಸ್ ಹೊಂದಿರುವ ಟವರ್-6 ವಸತಿ ಕಟ್ಟಡದಲ್ಲಿ 234 ವಸತಿ ಘಟಕಗಳು ಮತ್ತು ಇಡಬ್ಲ್ಯೂಎಸ್ 26 ಘಟಕಗಳು, 2ತಳ+ನೆಲ+30 ಮೇಲಂತಸ್ತು + ಟೆರೇಸ್ ಹೊಂದಿರುವ ಟವರ್-7 ವಸತಿ ಕಟ್ಟಡದಲ್ಲಿ 234 ವಸತಿ ಘಟಕಗಳು ಮತ್ತು ಇಡಬ್ಲ್ಯೂಎಸ್ 26 ಘಟಕಗಳು ಒಟ್ಟಾರೆ 468 ವಸತಿ ಘಟಕಗಳು ಮತ್ತು ಇಡಬ್ಲ್ಯೂಎಸ್ 52 ವಸತಿ ಘಟಕಗಳನ್ನೊಳಗೊಂಡ ಬಹುಮಹಡಿ ವಸತಿ ಸಮುಚ್ಛಯ ಕಟ್ಟಡಗಳಿಗೆ ಮತ್ತು ಟವರ್-6 & 7 ರಲ್ಲಿ ನೆಲ ಅಂತಸ್ತಿನಲ್ಲಿ ಕ್ಲಬ್ ಹೌಸ್ ಹೊಂದಿರುವ ಕಟ್ಟಡವನ್ನು ನಿರ್ಮಿಸಲು ಈ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಪಾಲಿಸುವ ನಿಬಂಧನೆಗೊಳಪಟ್ಟು ದಿನಾಂಕ: **07.05.2025** ರಂದು ಮಾರ್ಪಡಿತ ನಕ್ಷೆ ಮಂಜೂರಾತಿ ನೀಡಲಾಗಿದೆ. ಈ ನಕ್ಷೆ ಮಂಜೂರಾತಿಯು **ದಿನಾಂಕ: 07.05.2025** ರಿಂದ **ದಿನಾಂಕ: 06.05.2027** ರವರೆಗೆ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ ಎಂದು ಈ ಮೂಲಕ ತಮಗೆ ತಿಳಿಸಲಾಗಿದೆ.

## ಪಾಲಿಸಬೇಕಾದ ಷರತ್ತುಗಳು

1) ಸದರಿ ವಸತಿ ಯೋಜನೆಯಲ್ಲಿನ ಬಹುಮಹಡಿ ವಸತಿ ಕಟ್ಟಡಗಳು ಪ್ರಾಧಿಕಾರದಿಂದ ಈ ಹಿಂದೆ ದಿನಾಂಕ: 11.12.2020 ರಂದು ನೀಡಿರುವ ಮರು ಮಾರ್ಪಡಿತ ನಕ್ಷೆ ಮಂಜೂರಾತಿ ಪತ್ರ ಸಂಖ್ಯೆ: ಬೆಂಅಪ್ರಾ/ನಮ/ಅಸ/ಅಅ-1/ತಾಸ-2/ದ/11/2020-21 ರದ್ದಾಗುತ್ತದೆ.
2) ಪ್ರಾಧಿಕಾರದಿಂದ ಮಂಜೂರಾದ ಮರು ಮಾರ್ಪಡಿತ ಕಟ್ಟಡ ನಕ್ಷೆಯಂತೆಯೇ ಉದ್ದೇಶಿತ ಕಟ್ಟಡಕ್ಕೆ ನಡುಜಾಗಗಳನ್ನು ಬಿಟ್ಟು ಯಾವುದೇ ಉಲ್ಲಂಘನೆ ಮಾಡದೇ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸುವ ಷರತ್ತಿಗೊಳಪಡಿಸಿದೆ. ತಪ್ಪಿದಲ್ಲಿ ಮಂಜೂರಾದ ನಕ್ಷೆಯನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಪಡಿಸಲಾಗುವುದು ಹಾಗೂ ನಕ್ಷೆ ಮಂಜೂರಾತಿ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.
3) Sewage discharge ಗೆ ಸಂಬಂಧಿಸಿದಂತೆ STP ನಿರ್ಮಿಸುವುದಕ್ಕಾಗಿ KSPCB ಇಲಾಖೆಯಿಂದ CFE ಪತ್ರ ಪಡೆದು ಪ್ರಾರಂಭಿಕ ಪ್ರಮಾಣ ಪತ್ರ ಪಡೆಯುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸುವುದು.
4) ಕಟ್ಟಡ ಕೆಲಸ ಪ್ರಾರಂಭಿಸುವ ಮುನ್ನ ಕಾರ್ಮಿಕರಿಗೆ ತಾತ್ಕಾಲಿಕ ಶೌಚಾಲಯವನ್ನು ಕಡ್ಡಾಯವಾಗಿ ನಿರ್ಮಿಸುವುದು ಮತ್ತು ನಿರ್ವಹಿಸಿ ಶುಚಿತ್ವವನ್ನು ಕಾಪಾಡುವುದು.
5) ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳಾದ KSPCB/BESCOM /AAI/KSFES/SEIAA/BWSSB/BSNL ರವರು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ನು ಚಾಚೂ ತಪ್ಪದೇ ಪಾಲಿಸುವುದು. ತಪ್ಪಿದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರ/ಸ್ವಾಧೀನಾನುಭವ ಪತ್ರ ಪಡೆಯುವ ನಿಮ್ಮ ಕೋರಿಕೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.
6) ಅರ್ಜಿದಾರರು ಕಟ್ಟಡ ನಕ್ಷೆ ಮಂಜೂರಾತಿ ಸಮಯದಲ್ಲಿ ಬಾಕಿ ಇರುವ ಯಾವುದೇ ಅಭಿವೃದ್ಧಿ ಶುಲ್ಕ ಅಥವಾ ಇನ್ನಾವುದೇ ಶುಲ್ಕಗಳನ್ನು ಬಿಬಿಎಂಪಿ/ಬಿಡಿಎ ಸಂಸ್ಥೆಗಳಿಗೆ ಕಟ್ಟಡ ಪ್ರಾರಂಭಿಸುವ ಮೊದಲು ಸಂದಾಯ ಮಾಡತಕ್ಕದ್ದು.
7) ಅಭಿವೃದ್ಧಿದಾರರು ಭದ್ರತಾ ಸಿಬ್ಬಂದಿಯವರನ್ನು ನೇಮಿಸಿ ಕಟ್ಟಡದ ಪ್ರವೇಶ ದ್ವಾರದಲ್ಲಿ ಒಳಬರುವ ಹಾಗೂ ಹೊರಹೋಗುವ ವಾಹನಗಳಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು.
8) ಕಟ್ಟಡ ಮಂಜೂರಾತಿಯ ಕುರಿತು ಕಾರ್ಮಿಕ ಇಲಾಖೆ ಅಥವಾ ಪ್ರಾಧಿಕಾರ, ನಿರ್ದೇಶನ ನೀಡಿದಲ್ಲಿ ಅರ್ಜಿದಾರರು ವ್ಯತ್ಯಾಸದ ಹಣವನ್ನು ಭರಿಸತಕ್ಕದ್ದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

9) ಕಟ್ಟಡ ನಿರ್ಮಾಣ ವೆಚ್ಚವು ಪ್ರತೀ ಚದರ ಅಡಿಗೆ 650/- ಕ್ಕಿಂತ ಹೆಚ್ಚಾದಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಅಂದಾಜು ಮೊತ್ತದ ಶೇ.1 % ರಷ್ಟು ಮೊತ್ತವನ್ನು ಪ್ರಾಧಿಕಾರಕ್ಕೆ ಭರಿಸತಕ್ಕದ್ದು.

10) ಅರ್ಜಿದಾರರು ಕಾಮಗಾರಿ ಪ್ರಾರಂಭಿಸುವ ಮೊದಲು ಕಾಮಗಾರಿ ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಕಾಮಗಾರಿ ಮುಕ್ತಾಯದ ನಂತರ ಸ್ವಾಧೀನಾನುಭವ ಪತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಡೆಯುವುದು ಕಡ್ಡಾಯವಿರುತ್ತದೆ.

11) ಅರ್ಜಿದಾರರು ಕಟ್ಟಡಕ್ಕೆ ಬೇಕಾದ ವಿದ್ಯುಚ್ಛಕ್ತಿಯ ಪರ್ಯಾಯ ವ್ಯವಸ್ಥೆಗಾಗಿ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು ಮತ್ತು ಕಟ್ಟಡದಲ್ಲಿ ಸೋಲಾರ್ ಲೈಟಿಂಗ್ ಮತ್ತು ಸೋಲಾರ್ ವಾಟರ್ ಹೀಟಿಂಗ್ ವ್ಯವಸ್ಥೆಯನ್ನು ಅಳವಡಿಸತಕ್ಕದ್ದು.

12) ಕಟ್ಟಡ ಕಾಮಗಾರಿ ಪ್ರಾರಂಭವಾದ ನಂತರ ಕಟ್ಟಡ ಸುರಕ್ಷತೆಗೆ ಸಂಬಂಧಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ, ಈ ಅಂಶಗಳ ಪೂರ್ಣ ಜವಾಬ್ದಾರಿಯು ಅಭಿವೃದ್ಧಿದಾರರದ್ದೇ ಆಗಿರುತ್ತದೆ.

13) ಯೋಜನೆಯಲ್ಲಿ ಮಳೆ ನೀರು ಕೊಯ್ಲುಗಾಗಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಗೃಹ ಹಾಗೂ ಇನ್ನಿತರೆ ಉಪಯೋಗಗಳಿಗಾಗಿ ಬಳಸಲು ಅವಕಾಶ ಕಲ್ಪಿಸಿಕೊಳ್ಳತಕ್ಕದ್ದು.

14) ಕುಡಿಯುವ ನೀರು ಹಾಗೂ ತ್ಯಾಜ್ಯ ನೀರು ವಿಲೇವಾರಿಗಾಗಿ Sewage Treatment Plant ಸಹಿತ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. ಕುಡಿಯುವ ನೀರು ಸರಬರಾಜು ಕುರಿತು ವಿವರವಾದ ವರದಿಯನ್ನು ಸಲ್ಲಿಸುವುದು. ಕುಡಿಯುವ ನೀರು ಮತ್ತು ಇತರ ಉಪಯೋಗಗಳಿಗೆ Dual Piping System ಅನ್ನು BWSSB ರವರ ನಿರ್ದೇಶನದಂತೆ ಅಳವಡಿಸುವುದು.

15) ಸ್ವಾಭಾವಿಕವಾಗಿ ಇಳಿಜಾರಿನ ಕಡೆ ಹೋಗುವ ಮಳೆ ನೀರನ್ನು ಡ್ರೈನ್ ಮುಖಾಂತರ ವ್ಯಾಲಿಗೆ ತಂದು ಸೇರಿಸುವುದು ಹಾಗೂ ನೀರು ಸರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು.

16) ಅಭಿವೃದ್ಧಿದಾರರು ಒಳಚರಂಡಿ ವ್ಯವಸ್ಥೆ ಕಾಮಗಾರಿಯನ್ನು ಸಂಬಂಧಪಟ್ಟ ಇಲಾಖೆಗೆ (BWSSB & DB) ನಿಗದಿಪಡಿಸಿದ ಹಣವನ್ನು ಸಂಧಾಯ ಮಾಡಿ ಇಲಾಖೆಯವರ ಮಾರ್ಗದರ್ಶನದಲ್ಲಿ ನಿರ್ವಹಿಸುವುದು.

17) ಅರ್ಜಿದಾರರು Occupancy Certificate ಅನ್ನು ಪಡೆಯಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವ ಸಮಯದಲ್ಲಿ ನೀರು ಸರಬರಾಜು ಕಾಮಗಾರಿಗಳು, Sewage Treatment Plant ಹಾಗೂ Rain Water Harvesting ಅನ್ನು ನಿಯಮಕ್ಕನುಗುಣವಾಗಿ ನಿರ್ವಹಿಸಿರುವ ಬಗ್ಗೆ BWSSB ಯಿಂದ ದೃಢೀಕರಣ ಪತ್ರವನ್ನು ಸಲ್ಲಿಸುವುದು. ಹಾಗೆಯೇ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದಲೂ ಸಹ ಯೋಜನೆಯ ಸಮರ್ಪಕ ಅನುಷ್ಠಾನದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸುವುದು.

18) ಪ್ರಸ್ತಾವಿತ ಪ್ರದೇಶದಲ್ಲಿ 01 ಹೆಕ್ಟರ್ ಪ್ರದೇಶದಲ್ಲಿ 40 ಮರಗಳಂತೆ ವಿವಿಧ ಜಾತಿ ಗಿಡ, ಮರಗಳನ್ನು ಬೆಳೆಸಿ ಅಭಿವೃದ್ಧಿಪಡಿಸುವುದು

19) ಅರ್ಜಿದಾರರು ಯಾವುದೇ ರೀತಿಯ ಪ್ಲಾಸ್ಟಿಕ್, ಪೇಪರ್, ಗಾರ್ಬೇಜ್ ಇತ್ಯಾದಿ ತ್ಯಾಜ್ಯಗಳನ್ನು ಸಂಗ್ರಹಿಸಿ Drywaste ಮತ್ತು Wetwaste ಅನ್ನು ಬೇರ್ಪಡಿಸಿ ನಿಗದಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

20) ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಬೆಂಗಳೂರು ರವರ ದಿನಾಂಕ: 04-03-2006 ರಂದು ವಿಧಿಸಿದ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.

21) ಅರ್ಜಿದಾರರು ನೀರು ಸರಬರಾಜಿಗಾಗಿ ಸಂಬಂಧಪಟ್ಟ ಇಲಾಖೆಯನ್ನು (BWSSB) ಅವಲಂಬಿಸದೇ ನೀರಿಗಾಗಿ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳುವುದು.

22) ಅಭಿವೃದ್ಧಿದಾರರು ವಿದ್ಯುತ್ ಶ್ಯಕ್ತಿ ಟ್ರಾನ್ಸ್ ಫಾರ್ಮರ್, RWH, SWM, Garbage Yard ಹಾಗೂ S.T.P. ಗಾಗಿ (ಮಂಜೂರಾದ ಮರು ಮಾರ್ಪಡಿತ ನಕ್ಷೆಯಲ್ಲಿ ತೋರಿಸಿದಂತೆ) ಮೀಸಲಿರಿಸಿದ ಜಾಗದಲ್ಲಿಯೇ ಅದನ್ನು ಸ್ಥಾಪಿಸುವುದು.

23) ಅಭಿವೃದ್ಧಿದಾರರು ಯೋಜನೆ/ಕಟ್ಟಡ ನಿರ್ಮಾಣಕ್ಕಾಗಿ ಅಗತ್ಯ ವಿನ್ಯಾಸಗಳನ್ನು ತಯಾರಿಸಿಕೊಳ್ಳಲು ಕರ್ನಾಟಕ ರಾಜ್ಯ ಸರ್ಕಾರದಿಂದ ನೊಂದಾಯಿತ Structural Engineer ರವರನ್ನು ನೇಮಿಸಿಕೊಂಡು ಅಗತ್ಯ ತಾಂತ್ರಿಕ ವಿನ್ಯಾಸಗಳನ್ನು ತಯಾರಿಸಿಕೊಂಡು ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳತಕ್ಕದ್ದು, ಕಟ್ಟಡವನ್ನು ನಿರ್ಮಿಸಿರುವ ಬಗ್ಗೆ Structural Engineer ರವರಿಂದ ನಮೂನೆ-2 ರಲ್ಲಿ ಪ್ರಮಾಣ ಪತ್ರವನ್ನು (Affidavit) ಸ್ವಾಧೀನಾನುಭವ ಪತ್ರ ಪಡೆಯುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.



ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

24) ಅಭಿವೃದ್ಧಿದಾರರು ಯೋಜನೆ/ಕಟ್ಟಡ ನಿರ್ಮಾಣ ಕಾರ್ಯವನ್ನು ಸರ್ಕಾರದಿಂದ ನೊಂದಾಯಿತ ವಿನ್ಯಾಸಕಾರರಿಂದ (Architect) ಪೂರ್ಣೈಸುವುದು ಹಾಗೂ ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ವಿನ್ಯಾಸಕಾರರಿಂದ Completion Certificate ಪಡೆದು ಸಲ್ಲಿಸುವುದು.

25) ಅರ್ಜಿದಾರರು ಕಟ್ಟಡದಲ್ಲಿನ ವಿದ್ಯುತ್ತೀಕರಣ ಕಾಮಗಾರಿಗಳನ್ನು ಸರ್ಕಾರದಿಂದ ನೊಂದಾಯಿತ Electrical Contractor ರವರಿಂದ ಪೂರ್ಣೈಸುವುದು.

26) ಅರ್ಜಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಇನ್ಯಾವುದೇ ಸಾಮಗ್ರಿಗಳಿಂದಾಗಲೀ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ಬ್ಯಾರಿಕೇಂಡಿಂಗ್ ವ್ಯವಸ್ಥೆ ಮಾಡಿಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು, ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮಕ್ಕೈಗೊಳ್ಳಲಾಗುವುದು.

27) ಕಟ್ಟಡ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲೀಕತ್ವದ ಬಗ್ಗೆ ಅರ್ಜಿದಾರರು ತಪ್ಪು ಮಾಹಿತಿ/ದಾಖಲಾತಿ ನೀಡಿದ್ದು ನ್ಯಾಯಾಲಯದಲ್ಲಿ ತಕರಾರು ಉದ್ಭವವಾದಲ್ಲಿ ಕಟ್ಟಡ ನಕ್ಷೆಯ ಅನುಮೋದನೆಯು ತನ್ನಿಂತಾನೇ ರದ್ದಾಗುತ್ತದೆ.

28) ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಸಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ಕಟ್ಟಡ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

29) ಅಭಿವೃದ್ಧಿದಾರರು ಬೆಟರ್ ಮೆಂಟ್ ತೆರಿಗೆ ಪಾವತಿಸುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದ ನೀಡುವ 45727-45730/2011(ಬೆಂಅಪ್ರಾ), ದಿನಾಂಕ: 03.09.2012ರ ತೀರ್ಮಾನದ ವಿರುದ್ಧ ಪ್ರಾಧಿಕಾರವು ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿದ್ದು, ಮೇಲ್ಮನವಿಯ ಕುರಿತು ನ್ಯಾಯಾಲಯ ನೀಡುವ ತೀರ್ಪಿಗೆ ಬದ್ಧರಾಗಿರಲು ಷರತ್ತಿಗೆ ಒಳಪಡಿಸಲಾಗಿದೆ.

30) ಗೌರವಾನ್ವಿತ ರಾಷ್ಟ್ರೀಯ ಹಸಿರು ನ್ಯಾಯಪೀಠ ರವರ ಪತ್ರ ಸಂಖ್ಯೆ: PCB/031/C&D/2016/5392/2020-21 ದಿನಾಂಕ: 25.02.2021 ರಂತೆ Construction and Demolition (C & D) ಕಸವನ್ನು ವಿಲೆ ಮಾಡುವ ಬಗ್ಗೆ ನಿರ್ವಹಣೆ ಯೋಜನೆಯನ್ನು ULB (Urban Local Body) ರವರಿಗೆ ಸಲ್ಲಿಸಿ ಅನುಮೋದನೆ ಪಡೆದು ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡುವ ಮುನ್ನ ಸಲ್ಲಿಸುವುದು

31) ಕಟ್ಟಡ ನಿರ್ಮಾಣದ ಸಮಯದಲ್ಲಿ ಸೆಂಟ್ರಿಂಗ್ ಅಥವಾ ಇನ್ನಿತರೆ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದಲ್ಲಿ ಅದಕ್ಕೆ ಅರ್ಜಿದಾರರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರಾತಿ ನೀಡಿದ ಇಲಾಖೆಯು ಜವಾಬ್ದಾರರಾಗಿರುವುದಿಲ್ಲ.

32) ಬಫರ್ ವಲಯಕ್ಕೆ ಸಂಬಂಧಿಸಿದಂತೆ ಮಾನ್ಯ ಹಸಿರು ನ್ಯಾಯಾಧಿಕರಣವು (NGT) ಈಗಾಗಲೇ ಹೊರಡಿಸಿರುವ ನಿರ್ದೇಶನಗಳಿಗೆ ಮತ್ತು ಆಗಿಂದಾಗ್ಗೆ ಹೊರಡಿಸುವ / ವಿಧಿಸುವ ಯಾವುದೇ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.

33) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಭದ್ಧರಾಗಿರತಕ್ಕದ್ದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಯಥಾಪ್ರತಿಯನ್ನು :-

ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಿಭಾಗ, ಬೆಂ.ಅ.ಪ್ರಾ., ಬಿಡಿಎ ವಾಣಿಜ್ಯ ಸಂಕೀರ್ಣ, ಬನಶಂಕರಿ 2ನೇ ಹಂತ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.